1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ)

**ಎಸ್.ಸಿ. ಸಂಖ್ಯೆ 5005/2026**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ಕೊಳ್ಳೇಗಾಲ ಗ್ರಾಮಾಂತರ ಪೋಲಿಸ್ ಠಾಣೆ

ವಿರುದ್ಧ

ಆರೋಪಿ ಃ ಪನ್ನಾಡಿನಾಯ್ಕ

**ದೋಷಾರೋಪಣೆ**

ಟಿ.ಸಿ. ಶ್ರೀಕಾಂತ್, ಬಿ.ಕಾಂ. ಎಲ್ಎಲ್‌ಬಿ., ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ) ಆದ ನಾನು,

**ಆರೋಪಿ – ಪನ್ನಾಡಿನಾಯ್ಕ**

ನಿನ್ನ ಮೇಲೆ ಮಾಡುವ ದೋಷಾರೋಪಣವೇನೆಂದರೆ –

ಮೊದಲನೆಯದಾಗಿ, ದಿನಾಂಕ 12–06–2025 ರಂದು ಬೆಳಿಗ್ಗೆ 08–00 ಗಂಟೆ ಸಮಯದಲ್ಲಿ ರಾಶೀಬೋಳಿತಾಂಡ ಗ್ರಾಮದಲ್ಲಿ ಸಾಕ್ಷಿ–01 ರವರು ಮನೆಯಲ್ಲಿರುವಾಗ ಆರೋಪಿಯಾದ ನೀನು ಸಾಕ್ಷಿ–1 ಇವರಿಗೆ ನಿನ್ನ ದೈಹಿಕ ಸಂಪರ್ಕ ಬೇಕಾಗಿದೆ ಬಾ ಎಂದು ಕರೆಯಲಾಗಿ ಇದನ್ನು ಸಾಕ್ಷಿ–01 ರವರು ನಿರಾಕರಿಸಿದ್ದು, ಈ ಉದ್ದೇಶ ಮತ್ತು ಜಮೀನಿನ ಭಾಗಾಂಶದ ವಿಚಾರವಾಗಿ ದಿನಾಂಕ 13.06.2025 ಬೆಳಿಗ್ಗೆ 07–00 ಗಂಟೆ ಸಮಯಕ್ಕೆ ಆರೋಪಿಯಾದ ನೀನು ಸಾಕ್ಷಿ–01 ರವರ ಮನೆಯ ಹತ್ತಿರ ಹೋಗಿ ತೀಟೆ ಜಗಳ ತೆಗೆದು ಲೋಫರ್ ಮುಂಡೆ ಇತ್ಯಾದಿಯಾಗಿ ಕೆಟ್ಟ ಪದಗಳಿಂದ ಬೈದು ನಿಂದಿಸಿ ಶಾಂತಿಭಂಗವನ್ನು ಪ್ರಚೋದಿಸುವ ಉದ್ದೇಶದಿಂದ ಉದ್ದೇಶಪೂರ್ವಕ ಅವಮಾನ ಮಾಡಿರುತ್ತೀಯ, ಆ ಮೂಲಕ ಆರೋಪಿಯಾದ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ 352 ರ ರೀತಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀಯ ಮತ್ತು ಆ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀಯ.

ಎರಡನೆಯದಾಗಿ, ಮೇಲೆ ತಿಳಿಸಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಸಾಕ್ಷಿ–01 ರವರು ಮನೆಯಲ್ಲಿರುವಾಗ ಆರೋಪಿಯಾದ ನೀನು ಸಾಕ್ಷಿ–1 ಇವರಿಗೆ ನಿನ್ನ ದೈಹಿಕ ಸಂಪರ್ಕ ಬೇಕಾಗಿದೆ ಬಾ ಎಂದು ಕರೆಯಲಾಗಿ ಇದನ್ನು ಸಾಕ್ಷಿ–01 ರವರು ನಿರಾಕರಿಸಿದ್ದು, ಈ ಉದ್ದೇಶ ಮತ್ತು ಜಮೀನಿನ ಭಾಗಾಂಶದ ವಿಚಾರವಾಗಿ ದಿನಾಂಕ 13.06.2025 ಬೆಳಿಗ್ಗೆ 07–00 ಗಂಟೆ ಸಮಯಕ್ಕೆ ಆರೋಪಿಯಾದ ನೀನು ಸಾಕ್ಷಿ–01 ರವರ ಮನೆಯ ಹತ್ತಿರ ಹೋಗಿ ತೀಟೆ ಜಗಳ ತೆಗೆದು ಲೋಫರ್

ಮುಂಡೆ ಇತ್ಯಾದಿಯಾಗಿ ಕೆಟ್ಟ ಪದಗಳಿಂದ ಬೈದು ಸಾಕ್ಷಿ–01 ರವರ ಕುತ್ತಿಗೆಯ ಹತ್ತಿರ ಕೈಯಿಂದ ಹೊಡೆದು ಸ್ವಇಚ್ಛೆಯಿಂದ ಗಾಯಪಡಿಸಿ ಅವರನ್ನು ಚಪ್ಪಲಿಯಿಂದ ಮೈ ಕೈಗೆ ಹೊಡೆದು ಸಾಕ್ಷಿ–02 ರವರಿಗೂ ಸಹ ಕೈಯಿಂದ ಜುಟ್ಟು ಹಿಡಿದು ಬೆನ್ನಿನ ಹಿಂಭಾಗಕ್ಕೆ ಹೊಡೆದು ಗಾಯಗೊಳಿಸಿದ್ದು, ಅಷ್ಟರಲ್ಲಿ ಸಾಕ್ಷಿ–03 ರವರು ಜಗಳ ಹೋದಾಗ ಇವರನ್ನೂ ಸಹ ತಳ್ಳಿ ನೂಕಿ ಬೀಳಿಸಿ ಗಾಯಗೊಳಿಸಿರುತ್ತೀಯ, ಆ ಮೂಲಕ ಆರೋಪಿಯಾದ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ 115(2) ರ ರೀತಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀಯ ಮತ್ತು ಆ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀಯ.

ಮೂರನೆಯದಾಗಿ, ಮೇಲೆ ತಿಳಿಸಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಸಾಕ್ಷಿ-01 ರವರು ಮನೆಯಲ್ಲಿರುವಾಗ ಆರೋಪಿಯಾದ ನೀನು ಸಾಕ್ಷಿ-1 ಇವರಿಗೆ ನಿನ್ನ ದೈಹಿಕ ಸಂಪರ್ಕ ಬೇಕಾಗಿದೆ ಬಾ ಎಂದು ಕರೆದು, ಲೈಂಗಿಕ ಅನುಕೂಲಗಳಿಗಾಗಿ ಬೇಡಿಕೆ ಇಟ್ಟಿರುತ್ತೀಯ, ಆ ಮೂಲಕ ಆರೋಪಿಯಾದ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ 75(1) (ii) ರ ರೀತಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀಯ ಮತ್ತು ಆ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀಯ.

ನಾಲ್ಕನೆಯದಾಗಿ, ಮೇಲೆ ತಿಳಿಸಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಸಾಕ್ಷಿ–01 ರವರು ಮನೆಯಲ್ಲಿರುವಾಗ ಆರೋಪಿಯಾದ ನೀನು ಸಾಕ್ಷಿ–1 ಇವರಿಗೆ ನಿನ್ನ ದೈಹಿಕ ಸಂಪರ್ಕ ಬೇಕಾಗಿದೆ ಬಾ ಎಂದು ಕರೆಯಲಾಗಿ ಇದನ್ನು ಸಾಕ್ಷಿ–01 ರವರು ನಿರಾಕರಿಸಿದ್ದು, ಈ ಉದ್ದೇಶ ಮತ್ತು ಜಮೀನಿನ ಭಾಗಾಂಶದ ವಿಚಾರವಾಗಿ ದಿನಾಂಕ 13.06.2025 ಬೆಳಿಗ್ಗೆ 07–00 ಗಂಟೆ ಸಮಯಕ್ಕೆ ಆರೋಪಿಯಾದ ನೀನು ಸಾಕ್ಷಿ–01 ರವರ ಮನೆಯ ಹತ್ತಿರ ಹೋಗಿ ತೀಟೆ ಜಗಳ ತೆಗೆದು ಲೋಫರ್ ಮುಂಡೆ ಇತ್ಯಾದಿಯಾಗಿ ಕೆಟ್ಟ ಪದಗಳಿಂದ ಬೈದು ಸಾಕ್ಷಿ–01 ರವರ ಕುತ್ತಿಗೆಯ ಹತ್ತಿರ ಕೈಯಿಂದ ಹೊಡೆದು ಸ್ವಇಚ್ಛೆಯಿಂದ ಗಾಯಪಡಿಸಿ, ಅವರನ್ನು ಚಪ್ಪಲಿಯಿಂದ ಮೈ ಕೈಗೆ ಹೊಡೆದು ಸಾಕ್ಷಿ–02 ರವರಿಗೂ ಸಹ ಕೈಯಿಂದ ಜುಟ್ಟು ಹಿಡಿದು ಬೆನ್ನಿನ ಹಿಂಭಾಗಕ್ಕೆ ಹೊಡೆದು ಗಾಯಗೊಳಿಸಿದ್ದು, ಆ ಮೂಲಕ ಆರೋಪಿಯಾದ ನೀನು ಸಾಕ್ಷಿ–1 ರಿಂದ 3 ಇವರಿಂದ ಯಾವುದೇ ಗಂಭೀರ ಪ್ರಚೋದನೆ ಇಲ್ಲದಿದ್ದರೂ ಸಾಕ್ಷಿ–1 ಇವರನ್ನು ಅವಮಾನಿಸುವ ಉದ್ದೇಶದಿಂದ ಹಲ್ಲೆ ಮಾಡಿರುತ್ತೀಯ, ಆ ಮೂಲಕ ಆರೋಪಿಯಾದ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ 133 ರ ರೀತಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀಯ ಮತ್ತು ಆ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀಯ.

ಕೊನೆಯದಾಗಿ, ಮೇಲೆ ತಿಳಿಸಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಸಾಕ್ಷಿ–01 ರವರು ಮನೆಯಲ್ಲಿರುವಾಗ ಆರೋಪಿಯಾದ ನೀನು ಸಾಕ್ಷಿ–1 ಇವರಿಗೆ ನಿನ್ನ ದೈಹಿಕ ಸಂಪರ್ಕ ಬೇಕಾಗಿದೆ ಬಾ

ಎಂದು ಕರೆಯಲಾಗಿ ಇದನ್ನು ಸಾಕ್ಷಿ–01 ರವರು ನಿರಾಕರಿಸಿದ್ದು, ಈ ಉದ್ದೇಶ ಮತ್ತು ಜಮೀನಿನ ಭಾಗಾಂಶದ ವಿಚಾರವಾಗಿ ದಿನಾಂಕ 13.06.2025 ಬೆಳಿಗ್ಗೆ 07–00 ಗಂಟೆ ಸಮಯಕ್ಕೆ ಆರೋಪಿಯಾದ ನೀನು ಸಾಕ್ಷಿ–01 ರವರ ಮನೆಯ ಹತ್ತಿರ ಹೋಗಿ ತೀಟೆ ಜಗಳ ತೆಗೆದು ಲೋಫರ್ ಮುಂಡೆ ಇತ್ಯಾದಿಯಾಗಿ ಕೆಟ್ಟ ಪದಗಳಿಂದ ಬೈದು ಸಾಕ್ಷಿ–01 ರವರ ಕುತ್ತಿಗೆಯ ಹತ್ತಿರ ಕೈಯಿಂದ ಹೊಡೆದು ಸ್ವಇಚ್ಛೆಯಿಂದ ಗಾಯಪಡಿಸಿ ಅವರನ್ನು ಚಪ್ಪಲಿಯಿಂದ ಮೈ ಕೈಗೆ ಹೊಡೆದು ಸಾಕ್ಷಿ–02 ರವರಿಗೂ ಸಹ ಕೈಯಿಂದ ಜುಟ್ಟು ಹಿಡಿದು ಬೆನ್ನಿನ ಹಿಂಭಾಗಕ್ಕೆ ಹೊಡೆದು ಗಾಯಗೊಳಿಸಿದ್ದು, ಅಷ್ಟರಲ್ಲಿ ಸಾಕ್ಷಿ–03 ರವರು ಜಗಳ ಹೋದಾಗ ಇವರನ್ನೂ ಸಹ ತಳ್ಳಿ ನೂಕಿ ಬೀಳಿಸಿ ಗಾಯಗೊಳಿಸಿದ್ದು, ಅಷ್ಟಕ್ಕೆ ಸಾಕ್ಷಿ–04,05 ಬಂದು ಜಗಳ ಬಿಡಿಸಿದರೂ ಸಮಧಾನವಾಗದ ಆರೋಪಿಯಾದ ನೀನು ಸಾಕ್ಷಿ–01,02,03 ರವರಿಗೆ ಹೊಡೆಯುವ ಸಲುವಾಗಿ ದೊಣ್ಣೆಯನ್ನು ತಂದಿದ್ದು ಸಾಕ್ಷಿ–04,05 ರವರು ಆರೋಪಿಯಾದ ನಿನ್ನ ಕೈಯಿಂದ ದೊಣ್ಣೆಯನ್ನು ಕಿತ್ತುಕೊಂಡಿದ್ದು, ಆರೋಪಿಯಾದ ನೀನು ಇಷ್ಟಕ್ಕೂ ಸುಮ್ಮನಾಗದೆ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುತ್ತೀಯ, ಆ ಮೂಲಕ ಆರೋಪಿಯಾದ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ 351(2) ರ ರೀತಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀಯ ಮತ್ತು ಆ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀಯ.

ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಓದಿ ವಿವರಿಸಲಾಗಿ, ಅವರು ಅದನ್ನು ಅರ್ಥ ಮಾಡಿಕೊಂಡು ನೀಡಲಾದ ಉತ್ತರಗಳನ್ನು ನಾನು ನನ್ನ ಸ್ವಹಸ್ತಾಕ್ಷರದಲ್ಲಿ ಪ್ರತ್ಯೇಕವಾದ ಹಾಳೆಯಲ್ಲಿ ದಾಖಲು ಮಾಡಿಕೊಂಡಿರುತ್ತೇನೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 24-2-2026

(ಟಿ.ಸಿ. ಶ್ರೀಕಾಂತ್)

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ

(ಪೀಠಾಸೀನ ಕೊಳ್ಳೇಗಾಲ)

1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ)

**ಎಸ್.ಸಿ. ಸಂಖ್ಯೆ 5005/2026**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ಕೊಳ್ಳೇಗಾಲ ಗ್ರಾಮಾಂತರ ಪೋಲಿಸ್ ಠಾಣೆ

ವಿರುದ್ಧ

ಆರೋಪಿ ಃ ಪನ್ನಾಡಿನಾಯ್ಕ
ತಂದೆಃ ಪೊನ್ನುಸ್ವಾಮಿ,
50 ವರ್ಷ
ವಾಸಃ ರಾಶಿಬೋಳಿತಾಂಡ, ಜಾಗೇರಿ,
ಕೊಳ್ಳೇಗಾಲ ತಾಲ್ಲೂಕು,
ಚಾಮರಾಜನಗರ.

**ದೋಷಾರೋಪಣೆಃ**

ಪ್ರಶ್ನೆಃ 1: ಮೇಲೆ ಓದಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 2: ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ

ದಿನಾಂಕಃ 24-2-2026

(ಟಿ.ಸಿ. ಶ್ರೀಕಾಂತ್)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ
(ಪೀಠಾಸೀನ ಕೊಳ್ಳೇಗಾಲ)